ಪಿ.ಡಬ್ಲ್ಯು1

(ಇಂದು ದಿನಾಂಕ 21-06-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಡಿ.ಎಸ್.ಬಿ. ವಕೀಲರಿಂದಃ**

1 ನೇ ವಾದಿಯ ಹೆಸರಿನಲ್ಲಿ ದಿಃ 28-03-2018 ರಂದು ಕುಮಟಾ ಪುರಸಭೆಗೆ ನೀಡಿದ ಅರ್ಜಿಗೆ ಲಗ್ತುದಾರರು ಸೇರಿ ಸಹಿ ಮಾಡಿರುತ್ತಾರೆ ಎಂದರೆ ಸರಿ. ಸದ್ರಿ ಅರ್ಜಿಗೆ ಸಹಿ ಮಾಡಿದ ಎಲ್ಲ ಲಗ್ತುದಾರರನ್ನು ಈ ದಾವೆಗೆ ವಾದಿ ಅಥವಾ ಪ್ರತಿವಾದಿ ಪಕ್ಷಗಾರರನ್ನಾಗಿ ಸೇರಿಸಿದ್ದು ಇರುವುದಿಲ್ಲ ಎಂದರೆ ಸರಿ. ದಾವಾದಲ್ಲಿ ನಾನು ಕೇಳಿರುವ ಕಾಲು ದಾರಿಯು ನಮ್ಮ ಕುಟುಂಬದವರಿಗೆ ಮಾತ್ರ ಅವಶ್ಯಕತೆ ಇರುತ್ತದೆ. ಪುರಸಭೆಯವರು ನಾವು ದಿಃ 28-03-2018 ರಂದು ಸಲ್ಲಿಸಿದ ತಕರಾರು ಅರ್ಜಿಗೆ ನಿ.ಪಿ. 18 ರಂತೆ 1 ನೇ ಪ್ರತಿವಾದಿಯ ಹೆಂಡತಿಗೆ ತಿಳುವಳಿಕೆ ಪತ್ರವನ್ನು ಕೊಟ್ಟಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯ ಹೆಂಡತಿಯನ್ನು ನಾನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ನಾನು ನಿ.ಪಿ. 18 ನ್ನು ಓದಿ ತಿಳಿದುಕೊಂಡಿರುತ್ತೇನೆ. ನಿ.ಪಿ. 18 ರಲ್ಲಿ ಉಲ್ಲೇಖಿಸಿದ ಇತರ 7-8 ಕುಟುಂಬಗಳು ಅಂದರೆ ನಮ್ಮ ಕುಟುಂಬವನ್ನು ಹೊರತುಪಡಿಸಿ ಬೇರೆ ಕುಟುಂಬಗಳು ಎಂದರೆ ಸರಿ.

ಪ್ರತಿವಾದಿಯವರು ದಾವಾ ಆಸ್ತಿಯಲ್ಲಿ ವಿವರಿಸಿರುವ ಕಾಲು ದಾರಿಗೆ ಅಡ್ಡಲಾಗಿ ಕಟ್ಟೆ ಕಟ್ಟಿದ ನಂತರ ನಾನು ಪ್ರತಿವಾದಿಗೆ ಯಾವುದೇ ನೊಟೀಸನ್ನು ನೀಡಿದ್ದು ಇರುವುದಿಲ್ಲ. ನಾನು ದಾವೆಯಲ್ಲಿ ನಮೂದಿಸಿರುವ ಕಾಲು ದಾರಿಯು ನಮ್ಮ ಹಕ್ಕಿನ ಆಸ್ತಿಯ ಮೂಲಕ ಹಾದು ಹೋಗುವುದಿಲ್ಲ ಎಂದರೆ ಸರಿ. ಪ್ರತಿವಾದಿಯ ಹಕ್ಕಿನ ಸ.ನಂ. 482 ಹಿಸ್ಸಾ 2ಇ1 ರಲ್ಲಿ ಯಾವುದೇ ಖರಾಬು ಜಾಗ ಇರುವುದಿಲ್ಲ ಎಂದರೆ ಸರಿ. ನನ್ನ ದಾವಾ ವಾದ ಪತ್ರದ ಜೊತೆಗೆ ಸಲ್ಲಿಸಿರುವ ಹಾತ್ ನಕಾಶೆಯಲ್ಲಿ ಪೀಠ ಎಂದು ನಮೂದಿಸಿರುವ ಗುರುತಿನ ಭಾಗವು ಕಲ್ಲಿನ ಕಟ್ಟೆಯಾಗಿರುತ್ತದೆ ಎಂದರೆ ಸರಿ. ಸದರಿ ಕಟ್ಟೆಯು ದಾವಾ ಸ.ನಂ. 482 ಹಿಸ್ಸಾ 2ಡ1ರ ಸರ್ವೇ ಗಡಿ ಒಳಗೆ ಇರುತ್ತದೆ ಎಂದರೆ ಸರಿ. ನನ್ನ ಹಾತ್ ನಕಾಶೆಯಲ್ಲಿ ಪೀಠ

ಎಂದು ಗುರುತಿಸಿರುವ ಸ್ಥಳ ಹಾಗೂ ಸ.ನಂ. 482 ಹಿಸ್ಸಾ 2ಡ 1 ರ ಉತ್ತರದ ಗಡಿಯ ವರೆಗೆ ನಡುವಿನ ಅಂತರ 4 ಫೂಟ್ ಇರುತ್ತದೆ. 1 ನೇ ಪ್ರತಿವಾದಿಯ ಹೆಂಡತಿಯು  ಸ.ನಂ. 482 ಹಿಸ್ಸಾ 2ಡ 1 ರಲ್ಲಿ ಸರಕಾರದ ಆಶ್ರಯ ಯೋಜನೆಯಡಿ ಮಂಜೂರಾದ ಮನೆಯನ್ನು ಹಳೆ ಮನೆ ಇದ್ದ ಸ್ಥಳದಲ್ಲಿ ಹೊಸದಾಗಿ ಕಟ್ಟಿರುತ್ತಾರೆ ಎಂದರೆ ಸಾಕ್ಷಿಯು ಕಾಲು ದಾರಿಯ ಮೇಲೆ ಅವರ ಹೊಸ ಮನೆಯ ಸೀಟ್ ಔಟ್ ಪಿಲ್ಲರ್ ಕಂಬ ಬಂದಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಹಾತ್ ನಕಾಶೆಯಲ್ಲಿ ಗುರುತಿಸಿರುವ ಪೀಠದಿಂದ 3 ಫೂಟ್ ಅಂತರದಿಂದ ದಕ್ಷಿಣ ದಿಕ್ಕಿನಲ್ಲಿ ಸೀಟ್ ಔಟ್ ಪಿಲ್ಲರ್ ಕಂಬ ಮಾಡಿರುತ್ತಾರೆ. ಪ್ರತಿವಾದಿಯವರು ನಿರ್ಮಿಸಿಕೊಂಡ ಪೀಠವು 3 ಫೂಟ್ ಉದ್ದ ಅಗಲ ಇದೆ. ಸದರಿ ಕಟ್ಟೆಯನ್ನು  ಪ್ರತಿವಾದಿಯವರು ತುಳಸಿ ಕಟ್ಟೆ  ನಿರ್ಮಿಸುವ ಉದ್ದೇಶಕ್ಕಾಗಿ ಕಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಹಿಂದು ಸಂಪ್ರದಾಯದ ಪ್ರಕಾರ ಮನೆಯ ಮುಂದೆ ಅಂಗಳದಲ್ಲಿ ತುಳಸಿ ಕಟ್ಟೆ ನಿರ್ಮಿಸಿ ಪೂಜೆ ಮಾಡುವ ಸಂಪ್ರದಾಯ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪ್ರತಿವಾದಿಯವರಿಗೆ ಈಗಾಗಲೇ ತುಳಸಿ ಕಟ್ಟೆ ಇರುತ್ತದೆ ಎಂದು ನುಡಿಯುತ್ತಾರೆ.

ನಾನು ಪ್ರತಿವಾದಿಯವರು ಈಗಾಗಲೇ ಇದೇ ಎಂದು ಹೇಳುವ ತುಳಸಿ ಕಟ್ಟೆಯು ಬಹಳ ವರ್ಷಗಳಿಂದ ಇರುತ್ತದೆ. ಪ್ರತಿವಾದಿಯವರ ಮನೆಯ ಅಂಗಳಲ್ಲಿ ಬಹಳ ವರ್ಷಗಳಿಂದ ಅಸ್ತಿತ್ವದಲ್ಲಿರುವ ತುಳಸಿ ಕಟ್ಟೆ ಇರುವ ಬಗ್ಗೆ ನಾನು ನಮ್ಮ ವಕೀಲರಿಗೆ ಮಾಹಿತಿಯನ್ನು ನೀಡಿದ್ದು ಇರುವುದಿಲ್ಲ. ನಾನು ಬಹಳ ವರ್ಷಗಳಿಂದ ಪ್ರತಿವಾದಿಯವರ ಅಂಗಳದಲ್ಲಿರುವ ತುಳಸಿ ಕಟ್ಟೆ ಹಾತ್ ನಕಾಶೆಯಲ್ಲಿ ನಮೂದು ಮಾಡಬೇಕಾ ಎಂಬ ಬಗ್ಗೆ ನಾನು ವಕೀಲರೊಂದಿಗೆ ಚರ್ಚೆ ಮಾಡಿದ್ದು ಇರುವುದಿಲ್ಲ. ಪ್ರತಿವಾದಿಯವರು ದಾರಿಗೆ ಅಡ್ಡಲಾಗಿ ಕಟ್ಟಿರುವ ಕಟ್ಟೆಯನ್ನು ಯಾವ ಉದ್ದೇಶಕ್ಕಾಗಿ ಕಟ್ಟಿರುತ್ತೀರಿ ಎಂದು ಪ್ರತಿವಾದಿಯವರನ್ನು ಕೇಳಿದ್ದೀರಾ ಎಂದರೆ ಸಾಕ್ಷಿಯು ನಾನು ಕೇಳಿರುತ್ತೇನೆ, ಆದರೆ ಅವರು ಉತ್ತರವನ್ನು ನೀಡಿರುವುದಿಲ್ಲ. ಪ್ರತಿವಾದಿಯವರು ಸದರಿ ಕಟ್ಟೆಯನ್ನು ತುಳಸಿ ಕಟ್ಟೆ ನಿರ್ಮಿಸಿ ನಿತ್ಯ ಪೂಜೆ ಮಾಡುವ ಉದ್ದೇಶಕ್ಕಾಗಿ ಅವರ ಸ್ಥಳದ ಒಳಗಡೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಸ.ನಂ. 482 ಹಿಸ್ಸಾ 2ಇ 1 ರಲ್ಲಿ ಕಾಲು

ದಾರಿ, ತೆಂಗಿನ ಮರ ಇರುತ್ತದೆ. ಸ.ನಂ. 482 ಹಿಸ್ಸಾ 2ಇ 1 ರಲ್ಲಿ ಕಾಲು ದಾರಿ ಅಗಲ ನನಗೆ ಗೊತ್ತಿಲ್ಲ. ಸ.ನಂ. 482 ಹಿಸ್ಸಾ 2ಇ 1 ರ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸ.ನಂ. 482 ಹಿಸ್ಸಾ 2ಇ 1 ರ ದಕ್ಷಿಣ ದಿಕ್ಕಿನಲ್ಲಿ ಕಾಲು ದಾರಿ ಹಾದು ಹೋಗಿರುತ್ತದೆ. ನಾನು ನನ್ನ ವಕೀಲರಿಗೆ ಸ.ನಂ. 482 ಹಿಸ್ಸಾ 2ಇ 1 ರ ದಕ್ಷಿಣ ದಿಕ್ಕಿನಲ್ಲಿ ಕಾಲು ದಾರಿ ಹಾದು ಹೋಗಿರುತ್ತದೆ ಎಂಬ ಮಾಹಿತಿ ವಕೀಲರಿಗೆ ನೀಡಿರುತ್ತೇನೆ. ಸ.ನಂ. 482 ಹಿಸ್ಸಾ 2ಇ 1 ರ ಉತ್ತರ ದಿಕ್ಕಿಗೆ ಸ.ನಂ. 482 ಹಿಸ್ಸಾ 2ಡ1 ಇದೆ. ಸ.ನಂ. 482 ಹಿಸ್ಸಾ 2ಡ1 ರ ಪಶ್ಚಿಮ ದಿಕ್ಕಿನ ಗಡಿಗೆ ಹೊಂದಿಗೆ ಪುರಸಭೆ ರಸ್ತೆ ಬಂದಿರುತ್ತದೆ. ಸ.ನಂ. 482 ಹಿಸ್ಸಾ 2ಡ1 ರ ಪಶ್ಚಿಮ ದಿಕ್ಕಿಗೆ ಇರುವ ಪುರಸಭೆ ರಸ್ತೆಗೆ ಲಗತ್ತಾಗಿ ಸ.ನಂ. 482 ಹಿಸ್ಸಾ 2 ಬ, ಹಿಸ್ಸಾ 2 ಕ, ಹಿಸ್ಸಾ 2ಡ2 ಇರುತ್ತದೆ ಎಂದರೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಸ.ನಂ. 482 ಹಿಸ್ಸಾ 2ಡ1 ರ ಪಶ್ಚಿಮ ದಿಕ್ಕಿಗೆ ಇರುವ ಪುರಸಭೆ ರಸ್ತೆಯು 4 ಫೂಟ್ ಹಾದು ಹೋಗಿರುತ್ತದೆ.

ಸ.ನಂ. 482 ಹಿಸ್ಸಾ 2ಡ1 ರ ಪೂರ್ವ ದಿಕ್ಕಿನಲ್ಲಿ ಪುರಸಭೆಯ ರಸ್ತೆ ಅಥವಾ ದಾರಿ ಇರುವುದಿಲ್ಲ ಆದರೆ ಕಾಲು ದಾರಿ ಇರುತ್ತದೆ. ಸದರಿ ಪೂರ್ವ ದಿಕ್ಕಿಗೆ ಇರುವ ಕಾಲು ದಾರಿಯು ಎಷ್ಟು ಅಗಲ ಇದೆ ಎಂದು ನನಗೆ ಗೊತ್ತಿಲ್ಲ. ಸ.ನಂ. 482 ಹಿಸ್ಸಾ 2ಇ 1 ರ ಪಶ್ಚಿಮ ದಿಕ್ಕಿನಲ್ಲಿ ಪುರಸಭೆ ರಸ್ತೆ ಇರುವುದಿಲ್ಲ ಆದರೆ ಕಾಲು ದಾರಿ ಇರುತ್ತದೆ. ಸದರಿ ಕಾಲು ದಾರಿ ಎಷ್ಟು ಅಗಲ ಇದೆ ಎಂದು ನನಗೆ ಗೊತ್ತಿಲ್ಲ. ಸ.ನಂ. 482 ಹಿಸ್ಸಾ 2ಇ 1 ರ ಪೂರ್ವದ ಗಡಿಯಲ್ಲಿ ಯಾವುದೇ ಕಾಲು ದಾರಿ ಅಥವಾ ಪುರಸಭೆ ರಸ್ತೆ ಇರುವುದಿಲ್ಲ. ಬಸ್ತಿಪೇಟೆ ಮುಖ್ಯ ರಸ್ತೆಯಿಂದ ನಮ್ಮ ಮನೆಯ ವರೆಗೆ ಇರುವ ಕಾಲು ದಾರಿಯು ಸ.ನಂ. 482 ಹಿಸ್ಸಾ 2ಡ1, ಹಿಸ್ಸಾ 2ಇ1, ಹಿಸ್ಸಾ 2ಡ1 ರ ಮೂಲಕ ಬಂದು ನಮ್ಮ ಮನೆಯ ಕಂಪೌಡ್ ನ ಹೊರಗೆ ಸೇರುತ್ತದೆ. ನಾನು ಮೇಲೆ ಹೇಳಿದ ಸ.ನಂ. ಹೊರತುಪಡಿಸಿ ಬೇರೆ ಸ.ನಂ. ಗಳಲ್ಲಿ ಕಾಲು ದಾರಿ ಹಾದು ಹೋಗಿರುವುದಿಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ